ನಾವು ಮನಗಾಣಬೇಕು. ಸಂಪನ್ನರನ್ನು ತಪ್ಪು ದಾರಿಗೆ ಎಳೆಸುವವರು ಬಹಳ. ಯಾಕೆಂದರೆ ತನ್ನನ್ನು ಯಾರೋ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಅಂತ ಅನ್ನಿಸಿದರೂ ತಮ್ಮನ್ನು ತಾವು ಕಾಪಾಡಿಕೊಳ್ಳುವಷ್ಟು ಸಿಟ್ಟು ಮಾಡಿಕೊಳ್ಳಲು ಸಾಧ್ಯವೇ ಆಗುವುದಿಲ್ಲ. ಅದೇ ಯಾರೋ ಮಿತಿ ಮೀರಿ ನಡೆದುಕೊಂಡಾಗ ಸ್ವಲ್ಪ ಒಗ್ಗರಣೆಗೆ ಅಂತ ಸಿಟ್ಟು ಮಾಡಿಕೊಂಡು ನೋಡಿ? ಇನ್ನೊಮ್ಮೆ ಅಷ್ಟು ಸುಲಭವಾಗಿ ಜನ ನಿಮ್ಮ ಹತ್ತಿರ ಬಂದು ಅಧಿಕಪ್ರಸಂಗತನ ಮಾಡುವುದೇ ಇಲ್ಲ.

ಸೂರ್ಯ ಬೆಳಗ್ಗೆ ಎದ್ದು ಸುಡದೆ ಹೋದರೆ ನಮಗೆ ಆಹಾರ ಸಿಕ್ಕುವುದದರೂ ಹೇಗೆ? ತಾಳ್ಮೆಯಿಂದ ಸುಮ್ಮನೆ ತನ್ನ ಕಿರಣಗಳನ್ನು ತಾನೇ ತನ್ನೊಳಗೆ ಸುತ್ತಿಸಿಕೊಂಡು ಕೂತರೆ ಭೂಮಿಯ ಮೇಲಿನ ಜೀವಜಂತುಗಳು ನಾಶವಾಗುವುದಿಲ್ಲವೇ? ಚಂದ್ರನ ತಣ್ಣನೆ ಬೆಳಕು ಚಂದವೇ ಸರಿ… ಆದರೆ ಅದರಿಂದ ಪ್ರೇಯಸಿ, ಪ್ರಿಯಕರ, ದುಃಖ, ವಿರಹ ಇತ್ಯಾದಿಗಳನ್ನು ಕುದುರಿಸಿಕೊಳ್ಳಬಹುದೇ ಹೊರತು ಅನ್ನ ಹುಟ್ಟುವುದಿಲ್ಲ. ಅನ್ನ ಹುಟ್ಟಬೇಕೆಂದರೆ ಸೂರ್ಯ ಸಿಟ್ಟಾಗಬೇಕು, ಸುಡಬೇಕು, ಬೆಳಗಬೇಕು.

ಜಗತ್ತಿನ ಎಲ್ಲಾ ಕ್ರಾಂತಿಗಳಿಗೂ ಸಿಟ್ಟೇ ಮೂಲದ್ರವ್ಯ, ಹಾಗೂ ಬಹುತೇಕ ಬದಲಾವಣೆಗಳೂ ಸಿಟ್ಟಿನಿಂದಲೇ ಆದಂಥವು ಎನ್ನುವುದು ಅರ್ಥ ಆಗಬೇಕಿದೆ. ಕೋಪಕ್ಕಿರುವ ಚಲನಾಶಕ್ತಿ ತಾಳ್ಮೆಗೆ ಇಲ್ಲವೇ ಇಲ್ಲ ಎನ್ನುವುದು ಪರಮ ಸತ್ಯ. ಸಿಟ್ಟಿಗೆ ನೇರನುಡಿಯ ಛಾತಿ ಇದೆ. ತಾಳ್ಮೆ ಸುತ್ತಿಬಳಸಿ ಬರುತ್ತದೆ. ಅದು ಅರ್ಥ ಆಗುವವರಿಗೆ ಆಗುತ್ತದೆ ಅಷ್ಟೇ. ಆದರೆ ಸಿಟ್ಟು ಎಲ್ಲರಿಗೂ ಅರ್ಥವಾಗುವ ಒಂದು ಸಾಧನ. ಇದಕ್ಕೆ ಶಕ್ತ ಅಭಿವ್ಯಕ್ತಿ ಇದೆ.

ತಾಳ್ಮೆಗೆ ಇರುವ 'ಸಂಪನ್ನತೆಯನ್ನು' ಬಹಳ ಕಾಲದಿಂದ ಸುಖಾ ಸುಮ್ಮನೆ ಪೋಷಿಸಿಕೊಂಡು ಬಂದಿರುವುದರಿಂದ ಮನುಷ್ಯಕುಲಕ್ಕೆ ಯಾವ ಲಾಭವೂ ಇಲ್ಲ. ಹಾಗೆ ನೋಡಿದರೆ ನಾವು ಸಿಟ್ಟಿಗೆ ಕಾರಣ ಹುಡುಕಲೇ ಬಾರದು. ಈ 'ತಾಳಿದವನು ಬಾಳಿಯಾನು' ಭಜನಾ ಮಂಡಲಿಗೆ ಸಿಟ್ಟು ಯಾಕೆ ಬರುವುದಿಲ್ಲ ಮತ್ತು ಇವರಿಂದ ಉಳಿದವರಿಗೆ ಆಗುವ ಹಾನಿ ಎಷ್ಟು ಎನ್ನುವುದನ್ನು ಸ್ಟಡಿ ಮಾಡಿ ಅರ್ಥ ಮಾಡಿಕೊಂಡು ಸಿಟ್ಟಿಗೆ ಇರುವ ಜೀವಪರತೆಯನ್ನೂ ಘನತೆಯನ್ನು ಮರುಸ್ಥಾಪನೆ ಮಾಡಬೇಕು. ಈ ಕೆಲಸ ತುರ್ತಾಗಿ ಆಗಬೇಕಿದೆ.

ಇಂತಿ "ದೊಡ್ಡ" ನಮಸ್ಕಾರಗಳು,
ಪ್ರೀತಿ ನಾಗರಾಜ
ಸದಸ್ಯರು
ಅಖಿಲ ಭಾರತ ಸಹಜ ಸಿಟ್ಟುಕೋರರ ಸಂಘ


### ಪ್ರೀತಿ ನಾಗರಾಜ

ವೃತ್ತಿಯಿಂದ ಪತ್ರಕರ್ತೆ. ದಾವಣಗೆರೆಯವರು. ಪ್ರಸ್ತುತ ಮೈಸೂರಿನ ನಿವಾಸಿ. ಪತ್ರಿಕೋದ್ಯಮ, ಮನಃಶಾಸ್ತ್ರಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದು, 'ಡೆಕ್ಕನ್ ಹೆರಾಲ್ಡ್', 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಗಳಲ್ಲಿ, 'ಸಿಎನ್‌ಬಿಸಿ' ಟೀವಿ ಚಾನೆಲ್‌ನಲ್ಲಿ ಕೆಲಸ ಮಾಡಿರುವ ಅನುಭವಿ. ರಂಗಭೂಮಿ ಮತ್ತು ಸಿನಿಮಾರಂಗದ ಪ್ರಸಿದ್ಧ ಅಭಿನೇತ್ರಿ ಬಿ. ಜಯಶ್ರೀ ಅವರ ಆತ್ಮಕತೆ 'ಕಣ್ಣಾ ಮುಚ್ಚೇ… ಕಾಡೇ ಗೂಡೇ…'ಯ ನಿರೂಪಕಿ. 'ಪ್ರಜಾವಾಣಿ' ಪತ್ರಿಕೆಯ 'ಕಾಮನಬಿಲ್ಲು' ಪುರವಣಿಯಲ್ಲಿ ಪ್ರಕಟಗೊಂಡ 'ಮಿರ್ಚಿ ಮಂಡಕ್ಕಿ' ಅಂಕಣ ಅದೇ ಹೆಸರಿನಲ್ಲಿ ಪುಸ್ತಕರೂಪದಲ್ಲಿ ಪ್ರಕಟಗೊಂಡಿದೆ.